Govt. of Karnataka.

Deposition Sheets
(R.P.No.57)
Form No.4 (Criminal)

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿಡ್ಲಘಟ್ಟ

**ಸಿ.ಸಿ.ಸಂ.613/2012**

| | | | |
|---|---|---|---|
| ಹೆಸರು | ಬೈರಮ್ಮ | ಪಿಡಬ್ಲ್ಯೂ: | 1 |
| ತಂದೆ ಹೆಸರು | ಚಿಕ್ಕಚೆಳ್ಳಪ್ಪ | ಸಿಡಬ್ಲ್ಯೂ: | 2 |
| ವಯಸ್ಸು | 76 | ಸಾಕ್ಷಿಗೆ ಪ್ರಮಾಣ ವಚನ | ಭೋದಿಸಿದೆ |
| ಉದ್ಯೋಗ | ಕೂಲಿ | ದಿನಾಂಕಃ | 18-12-2019 |
| ವಿಳಾಸ | ಕಾಡನಾಯಕನಹಳ್ಳಿ | | |

ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದ

ಚಾಸ-1 ನನ್ನ ಗಂಡ. ಆರೋಪಿ ನನ್ನ ಸೊಸೆ. ಸುಮಾರು 7 ವರ್ಷಗಳ ಹಿಂದೆ ಸುಮಾರು 1 ಗಂಟೆಗೆ ನಾವು ಮನೆಗೆ ಬಂದಾಗ ಮನೆಯ ಬೀಗವನ್ನು ಹೊಡೆದು ಹಾಕಿ ನನ್ನ ಸೊಸೆ ಮನೆಯ ಒಳಗಡೆ ಇದ್ದಳು. ನಾನು ಕೇಳಿದ್ದಕ್ಕೆ ನೀನ್ಯಾರೇ ಕೇಳುವುದಕ್ಕೆ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿಯು ಸುತ್ತಿಗೆಯಿಂದ ನನ್ನ ಗಂಡನ ತಲೆಗೆ ಹೊಡೆದಳು. ನಾನು ಹೋಗಿ ಏಕೆ ಹೊಡೆದಿದ್ದು ಎಂದು ಕೇಳಿದಾಗ, ನನ್ನ ಮುಖಕ್ಕೆ ಕುರ್ಚಿಯಿಂದ ಹೊಡ ದಿರುತ್ತಾಳೆ. ನನ್ನ ಹಲ್ಲು ಮುರಿದು ನನಗೆ ರಕ್ತಬಂತು. ನನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿ ತಿಳ್ಳಿರುತ್ತಾಳೆ. ಮನೆಯಲ್ಲಿ ಇರುವ ಶೋಕೇಸ್, ಪ್ರಿಡ್ಜ್‌ಅನ್ನು ಹೊಡೆದು ಹಾಕಿರುತ್ತಾರೆ. ಸುಮಾರು 50 ಸಾವಿರ ರೂ ನಷ್ಟ ಉಂಟಾಗಿರುತ್ತದೆ. ನನ್ನ ಮಗಳು ಆಂಬ್ಯುಲೆನ್ಸ್ ಮುಖಾಂತರ ಆಸ್ಪತ್ರೆಗೆ ಕರೆದುಕೊಂಡು ಬಂದಳು. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ.

ಪಾಟೀಸವಾಲುಃ ಪಾಟೀಸವಾಲಿಗೆ ಸಮಯ ಕೇಳಿದ್ದರಿಂದ 300 ರೂ ಖರ್ಚಿನ ಮೇರೆಗೆ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿ.ಜೆ. ಮತ್ತು ಜೆಎಂಎಫ್‌ಸಿ.
ಶಿಡ್ಲಘಟ್ಟ